2. ಪ್ಲಾನುಗಳು, ಅಂದಾಜಿ ಪಟ್ಟಿಗಳು, ದರಗಳ ಷೆಡ್ಯೂಲ್ ಪಟ್ಟಿ ಮತ್ತು ಷರತ್ತುಗಳು ಇವುಗಳನ್ನು ಅಸಿಸ್ಟೆಂಟ್ ಇಂಜಿನಿಯರ್ ಆಫೀಸಿನಲ್ಲಿ ಪ್ರತಿನಿತ್ಯವು ಪ್ರಾತಃಕಾಲ 11 ಘಂಟೆಲಾಗಾಯಿತು, ಸಾಯಂಕಾಲ 4 ಘಂಟೆ ವರಿಗೂ ನೋಡಬಹುದು.

3. ಛಾಪಿಸಿದ ದರಖಾಸ್ತು ನಮೂನೆಗಳಿಗಾಗಿ ಅಸಿಸ್ಟೆಂಟ್ ಇಂಜನಿಯರವರಿಗೆ ಬರದುಕೊಂಡಲ್ಲಿ ಬಗರ್ ಕಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪ ಲ್ ನಮೂದಿಸಿ ರುಜುನೀ ಲಕ್ಕೊಟ್ಟಿಯಲ್ಲಿ ಹಾಕಿ ಮೊಹರ್ಮಾಡಿ ಸ್ಯ 1885ನೇ ಇಸವಿ ಡಿಶಂಬರ್ 15ನೇ ತಾರೀಖಿಗೆ ಮುಂಚಿತವಾಗಿ ಎಕ್ಸ್‌ಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

2. ಯಾವವದಾದರು ಬಂದು ದರಖಾಸ್ತಿನ ಆಬ್ಜೆರು ಮಂಜೂರಾತಿಯು ಸೂಪರ್‌ಟೆಂಡಿಂಗ್ ಇಂಜನಿಯರವರನ್ನ ಹೊಂದಿರುತ್ತೆಯಾಗಿ ಈ ದರಖಾಸ್ತನೇಆಗಲಿ ಯಾ ಯಾವ ದರಖಾಸ್ತನ್ನೆಆಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಬಂದು ದರಖಾಸ್ತನ್ನ ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರಿಯವರು ಬದ್ಧರಾಗಿರುವದಿಲ್ಲ.

3. ದರಖಾಸ್ತು ಮಂಜೂರಾದ 8 ದಿನಗಳ ವಳಗಾಗಿ ದರಖಾಸ್ತುದಾರನು ನಗದಾಗಿ 250 ರೂಪಾಯಿಗಳ ಸೇವಣಾತಿಯನ್ನ ಇಡತಕ್ಕದ್ದಲ್ಲದೆ ಮಾಮೂಲ್ ವೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನ ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೆಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥಾವನ ಹೆಸರು ಕ್ರಮೇಣ ಅಸಿಸ್ಟೆಂಟ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯೂ ತಿರಸ್ಕಾರದ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ವಿ. ಅರುಣಾಚಲಂ,
ರೇಂಜ್ ಆಫೀಸರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 567.

ಮೃತಪಟ್ಟ ಹುಶೇನ್‌ಸಾಹೆಬ್ ಉರಫ್ ಚಿಂಣಾಮಿಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಸೈದ್ ಹುಶೇನ್‌ಸಾಹೆಬ್ ಮೃತಪಟ್ಟ ಸದರಿ ಹುಶೇನ್‌ಸಾಹೆಬ್ ಉರಫ್ ಚಿಂಣಾಮಿಯ್ಯ, ಮೊಮ್ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ಸ್ಥಳದ ಸದರೀ ಸೈದ್ ಹುಶೇನ್‌ಸಾಹೆಬರು ಸದರೀ ವಾಸಸ್ಥರಾಗಿ ಮೃತಪಟ್ಟ ಹುಶೇನ್‌ಸಾಹೆಬ್ ಉರಫ್ ಚಿಣಾಮಿಯ್ಯ ಜೆಂದಗಿ ಬಾಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೇಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೈದ್ ಹುಶೇನ್‌ಸಾಹೆಬರ ಅರ್ಜೀಯನ್ನು 1885ನೇ ಇಸವಿ ಡಿಶಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹುಶೇನ್‌ಸಾಹೆಬ್ ಉರ್ಫ್ ಚಿಂಣಾಮಿಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 609.

ಮೃತಪಟ್ಟ ಭೈರಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ನಂಜುಂಡಪ್ಪ, ಮೃತಪಟ್ಟ ಸದರೀ ಭೈರಂಣನವರಿಗೆ ದುಗ್ಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯದ ತಾಲ್ಲೂಕು ಮದ್ದೂರು ಫಿರಕಾ ಹೊನ್ನಹಳ್ಳಿ ಸ್ಥಳದ ಸದರೀ ನಂಜುಂಡಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಭೈರಂಣನವರ ಜೆಂದಗಿ ಬಾಗ್ಯಾಗಿ ಬರತಕ್ಕ 100 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ನಂಜುಂಡಪ್ಪನವರ ಅರ್ಜೀಯನ್ನು 1885ನೇ ಇಸವಿ ಡಿಶಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೈರಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 660.

ಮೃತಪಟ್ಟ ಲಕ್ಷ್ಮಣಸಿಂಗರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಹರೀಸಿಂಗ್ ಮೃತಪಟ್ಟ ಸದರೀ ಲಕ್ಷ್ಮಣಸಿಂಗರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜಿನಗೂಡು ತಾಲ್ಲೂಕು ತಾಯೂರು ಜೋಬಳಿ ಕುಪ್ಪನಹಳ್ಳಿ, ಸ್ಥಳದ ಸದರೀ ಹರೀಸಿಂಗರು ಸದರೀ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮಣಸಿಂಗರ ಜೆಂದಗಿ ಬಗ್ಯಾಗಿ ಬರತಕ್ಕ 90 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರೀಸಿಂಗರ ಅರ್ಜೀಯನ್ನು 1885ನೇಇಸವಿ ಡಿಸಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಣಸಿಂಗರ ಆಸ್ತಿಗೆ ಹಕ್ಕುದಾರರಾದ ವಿರುದ್ಧರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಛೆ.

1885ನೇ ಇಸವಿ ಡಿಸಂಬರ್ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿನಿ ನಮ್ಮ ದಸ್ತಖತ್ತೊಡನೆ ಕೊಜೋಣಾಗಿದೆ.

ವಿ. ಎ. ನರಸಿಮ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಅಡಿಷನಲ್ ಮುನಸಿಫ್ ಕೋರ್ಟಿನಲ್ಲಿ.

1885ನೇ ಇಸವಿ ಸಿವಿಲ್ ವ್ಯಾಜ್ಯದ ನಂ. 449.

ವಾದೀರು—ಮೈಸೂರು ಮಂಡಿಮೊಹಲ್ಲೆಯಲ್ಲಿರು ಮುಸಲ್ಮಾನರ ಜಾತಿ ವ್ಯಾಪಾರದ ಕಸಬುದಾರ್ರು 1ನೇ ಯಾಕೂಬ್‌ಸಾಬ 2ನೇ ಮಹಮ್ಮದ್ ನಬೀಸಾಬ್ 3ನೇ ಸೈಯದ್ ಮುರಾದ್ ಸಾಬ್.

ಪ್ರತಿವಾದಿ—ಸದರೀ ಮಂಡಿ ಮೊಹಲ್ಲೇಯಲ್ಲಿರುವ ಮುಸಲ್ಮಾನರಜಾತಿ ಷಹಅಲ್ಲಿಅಬ್ಬಾಸ್ ಸಾಹೇಬರವಮಗ ಸೈಯದ್ ಖಾದರ್‌ಳಾಭಳ್ಳ

ಮೇಲ್ಕಂಡ ವಾದಿರು ಪ್ರತಿವಾದೀರಿಂದ ಮೈಸೂರು ಮಂಡಿ ಮೊಹಲೇಯಲ್ಲಿರುವ ಒಂದು ಆಫೂರ್‌ಖಾನೆಯನ್ನು ಬರವಾಡಿಸಿ ಕೊಡಲು ಈ ಕೋರ್ಟು ಜಾಲತಿ ಇಸವಿ ಜೂಲೈತಿ ಮೇಲ್ಕಂಡ ನಂಬರಿನಲ್ಲಿ ಒಂದು ವ್ಯಾಜ್ಯವನ್ನು ದಾಖಲ್ಮಾಡುತ್ತಾರೆ ಸದರೀ ಆಫೂರು ಖಾನೆಗೆ ಮೈಸೂರು ಮಂಡಿ ಮೊಹಲಾದಲ್ಲಿರುವ ಮುಸಲಮಾನರ ಕೋಮಿನ ಜನರೆಲ್ಲತ್ತು ಹಕ್ಕುದಾರ್ರಾಗಿರುವರೆಂತಲೂ ಮತ್ತು ಮೇಲ್ಕಂಡ ವಾದಿ ಯಾಕೂಬ್‌ಸಾಬ್ ವಗೈರೇರು ತಮಿಗೋಸ್ಕರಲು ಮತ್ತು ಇತರ ಆ ಮೊಹಲ್ಲಾದ ಮುಸಲ್ಮಾನ ಕೋಮಿನವರಿಗೋಸ್ಕರಲು ವ್ಯವಹಾರ ನಡಿಸಲು ಅಪ್ಪಣೆ ಕೊಡಿಸಬೇಕೆಂದು ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಪ್ರಕರಣ ಪ್ರಕಾರ ಈ ಕೋರ್ಟಿಗೆ ಮನವಿ ಮಾಡಿಕೊಂಡಿರುತ್ತಾರೆ. ಆದಕಾರಣ ಮೇಲ್ಕಂಡ ವ್ಯಾಜ್ಯವು ಕೋರ್ಟಿಗೆ ದಾಖಲಾಗಿರುವ ಸಂಗತಿಯನ್ನು ಈ ಮೂಲಕ ಸಮಸ್ತರಿಗೂ ತಿಳಿಸುತ್ತೆ ಮತ್ತು ಈ ವ್ಯಾಜ್ಯವು ಈ ಮಾಹೆ ತಾರೀಖು 18ನೇ ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ತನಿಖೆ ಬಗ್ಯೆ ಬರುವದು.

ಪಿಡ್ಯೂಲ್.

ಮೈಸೂರು ಮಂಡಿಮೊಹಲಾ ನಕ್ಷೆಬಂದ ಬೀದಿಯಲ್ಲಿ ಪೂರ್ವಕ್ಕೆ ಜನಗಳು ತಿರುಗಾಡುವ ಗಲ್ಲಿ ಪಶ್ಚಿಮಕ್ಕೆ ಹಕ್ತಂ ಮದಾರಸಾಬಿ ಮನೆ, ದಕ್ಷಿಣಕ್ಕೆ ಈ ಷೂರ್‌ಖಾನೆಗೆ ಸೇರಿದ ಅಡಿಗೆ ಮನೆ, ಉತ್ತರಕ್ಕೆ ಜೈರೋಡು. ಈ ಮಧ್ಯೆ ಇರುವ ಕಟ್ಟಡ ಅಂಕಣ 2, ಖಾಲಿಜಾಗಾ ಅಂಕಣ 2 ವುಳ್ಳ ಆಫೂರ್‌ಖಾನಾ, ಅಂದಾಜು 50 ರೂಪಾಯಿ.

ಸಿ. ಆರ್. ಸುಬ್ಬರಾಯರ್,
ಮುನಸಿಫ್.

ನಗರ ಡಿವೀಜ್ಯ.

ನಗರ್ ಡಿವೀಜ್ಯ ಡಿಸ್ಟ್ರಿಕ್ಟ್‌ಜಡ್ಜ್‌ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 109.

ಮೃತಪಟ್ಟ ಲಕ್ಷ್ಮೀ ರಮಣಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚನ್ನಗಿರಿ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ನಿಟ್ಟೂರು ವೆಂಕಟರಾಯ ಮೃತಪಟ್ಟ ಸದರೀ ಲಕ್ಷ್ಮೀ ರಮಣಯ್ಯನಿಗೆ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಗಿರಿ ತಾಲ್ಲೂಕು ಜುಡಿಷಿಯಲ್ ಗುಮಾಸ್ತೆ ನಿಟ್ಟೂರು ವೆಂಕಟರಾಯನು